ಹೊಸ ಪರಿಸ್ಥಿತಿಗಳು ನನಗೆ ಇನ್ನೊಂದು ಬಗೆಯ ಶ್ರದ್ಧೆಯನ್ನು ತಂದಿತ್ತವು.'

ತೇಜಸ್ವಿಯವರಂತೆಯೇ ಆರಂಭದಲ್ಲಿ ನವ್ಯ ಲೇಖಕರಾಗಿ ತಮ್ಮ ಬರಹಗಳಲ್ಲಿ ವ್ಯಕ್ತಿಯ ತೀವ್ರ ಪರೀಕ್ಷೆಯಲ್ಲಿ ತೊಡಗಿದ್ದ ಲಂಕೇಶರ ನೋಟ ಸಮಾಜವಾದಿ ಪಕ್ಷ, ಗೋಪಾಲಗೌಡ ಹಾಗೂ ಸಮಾಜವಾದಿ ಸಂಗಾತಿಗಳ ಸಂಗದಿಂದ ಬದಲಾಗತೊಡಗಿತು. ಸಮಾಜವಾದಿ ಸಂಜೆಗಳು ಲಂಕೇಶರನ್ನು ವಿಶಾಲ ಸಮುದಾಯ ಪ್ರಜ್ಞೆಯ ಲೇಖಕನನ್ನಾಗಿ ಬದಲಿಸಿದ ರೀತಿ ಅವರ ಆತ್ಮಕತೆ 'ಹುಳಿಮಾವಿನ ಮರ'ದಲ್ಲಿ ದಾಖಲಾಗಿದೆ:

'ಒಂದೊಂದು ಪೆಗ್ ಇಳಿದಂತೆಯೂ ಗೋಪಾಲ್, ಅಣ್ಣಯ್ಯ, ಭರ್ಮಪ್ಪ ಮುಂತಾದವರು ಚರ್ಚೆಯನ್ನು ಮಹಾನ್ ಸಂಗೀತದ ಮಟ್ಟಕ್ಕೆ ಏರಿಸುತ್ತಿದ್ದರು. ಅವರ ಅನುಭವ, ಪ್ರತಿಭೆ, ಹತಾಶೆಯೆಲ್ಲ ಪೂರ್ಣ ಅಭಿವ್ಯಕ್ತಿ ಪಡೆದು, ಅಲ್ಲಿರುತ್ತಿದ್ದ ನನ್ನಂಥವರಿಗೆ ಬದುಕಿನ ಅನಿರೀಕ್ಷಿತ ಸ್ತರಗಳು ಗೋಚರಿಸುತ್ತಿದ್ದವು. ಜಾತಿ, ಭಾಷೆ, ಹಣ, ವೈಭವ ಎಲ್ಲವನ್ನೂ ಮೀರಿದ ಸುಖೀರಾಜ್ಯವೊಂದು ಸೃಷ್ಟಿಯಾಗುತ್ತಿತ್ತು. ಆಗ ನಮ್ಮ ಸಮಾಜವಾದಿ ಪಕ್ಷದಲ್ಲಿದ್ದ ಕಮ್ಮಾರರು, ಕ್ಷೌರಿಕರು, ಮೋಚಿಗಳು, ರೈತರು, ಕಾರ್ಮಿಕರು... ಎಲ್ಲರೂ ಒಂದಾಗಿ ಅದ್ಭುತ ಜಗತ್ತೊಂದು ಸೃಷ್ಟಿಯಾಗುತ್ತಿತ್ತು. ಜಾತಿಗಳನ್ನು ಮರೆತು ಜನರನ್ನು ತಿಳಿದುಕೊಳ್ಳುವ, ಪ್ರೀತಿಸುವ, ಒಟ್ಟಾಗಿ ಸೃಷ್ಟಿಸುವ ರೋಮಾಂಚನ ಆ ದಿನಗಳಿಂದ ನನ್ನಲ್ಲಿ ಆರಂಭವಾಗಿರಬೇಕೆಂದು ನನಗನ್ನಿಸುತ್ತದೆ.'

ಲಂಕೇಶರ 'ಮುಸ್ಸಂಜೆಯ ಕಥಾಪ್ರಸಂಗ', ತೇಜಸ್ವಿಯವರ 'ಚಿದಂಬರ ರಹಸ್ಯ' ಕಾದಂಬರಿಗಳು ಲೋಹಿಯಾರ 'ಸರ್ವಸ್ವೀಕಾರ' ಸಮಾಜವಾದ, ಜಾತ್ಯತೀತ ನೋಟಗಳ ಮೂಲಕವೂ ಗ್ರಾಮಭಾರತವನ್ನು ಗ್ರಹಿಸಿದವು; ಜಾತಿವಿನಾಶವನ್ನು ಪ್ರತಿಪಾದಿಸಿದವು. ಈ ಇಬ್ಬರ ರಾಜಕೀಯ, ಸಾಮಾಜಿಕ ವಿಶ್ಲೇಷಣೆಗಳು ಲೋಹಿಯಾ ಸಮಾಜವಾದದ ಚೌಕಟ್ಟುಗಳನ್ನು ವಿಸ್ತರಿಸಿದವು.

1973ರಲ್ಲಿ ಕನ್ನಡ ಸಂಸ್ಕೃತಿಯಲ್ಲಿ ಹೊಸ ಪಲ್ಲಟ ತಂದ ಶೂದ್ರ 'ಬರಹಗಾರರ ಒಕ್ಕೂಟ'ದಲ್ಲಿ ಎಂ.ಡಿ. ನಂಜುಂಡಸ್ವಾಮಿ, ಚಂದ್ರಶೇಖರ ಪಾಟೀಲ, ಶೂದ್ರ ಶ್ರೀನಿವಾಸ್, ಕೆ. ರಾಮದಾಸ್, ಲಂಕೇಶ್, ಶ್ರೀಕೃಷ್ಣ ಆಲನಹಳ್ಳಿ ಮೊದಲಾದ ಲೋಹಿಯಾಮಾರ್ಗದ ಸಮಾಜವಾದಿಗಳು ಹೆಚ್ಚು ಇದ್ದರು. ಬಿ.ಎ. ವಿದ್ಯಾರ್ಥಿಯಾಗಿದ್ದ ಡಿ. ಆರ್. ನಾಗರಾಜ್ 'ಒಕ್ಕೂಟ'ದ ಸಮಾವೇಶದಿಂದ ಬಂದ ಮೇಲೆ ದೊಡ್ಡಬಳ್ಳಾಪುರದಲ್ಲಿ ಸಮಾಜವಾದಿ ಯುವಜನಸಭಾ ಮಾಡಿ, ಎಂ.ಡಿ.ಎನ್. ಜೊತೆ ಸೇರಿದರು; ಬಳಿಕ ಮಾರ್ಕ್ಸ್‌ವಾದದೆಡೆಗೆ ನಡೆದರು; ನಂತರ ಲೋಹಿಯಾರ ರಾಜಕೀಯ, ಸಾಂಸ್ಕೃತಿಕ ನೋಟಗಳಿಗೆ ವಾಪಸಾದರು.

ಕರ್ನಾಟಕದ ದಲಿತ ಚಳುವಳಿಗೆ ಬುನಾದಿ ಹಾಕಿದ ಬಿ. ಕೃಷ್ಣಪ್ಪ, ದೇವನೂರ ಮಹದೇವ, ಶ್ರೀಧರ ಕಲಿವೀರ, ಗೋವಿಂದಯ್ಯ, ಇಂದೂಧರ ಹೊನ್ನಾಪುರ ಥರದ ಹಲವು ಚಿಂತಕ–ನಾಯಕರು

## ಕಳೆದ ಸಂಚಿಕೆಯಲ್ಲಿ



1967ರ ಲೋಕಸಭಾ ಚುನಾವಣೆಯಲ್ಲಿ ಉತ್ತರಪ್ರದೇಶದ ಕನೌಜ್ ಕ್ಷೇತ್ರದಿಂದ ಸ್ಪರ್ಧಿಸಿ ಲೋಹಿಯಾ ಗೆದ್ದರು. ಅಧಿಕಾರಕ್ಕಾಗಿ ಒಟ್ಟಾಗಿದ್ದ ವಿರೋಧ ಪಕ್ಷಗಳು ತತ್ವ–ಸಿದ್ಧಾಂತಗಳ ದೃಷ್ಟಿಯಿಂದ ವಿರುದ್ಧ ದಿಕ್ಕಿನಲ್ಲಿದ್ದುದನ್ನು ಅವರು ಗಮನಿಸಿದರು. ಲೋಕಸಭೆಯಲ್ಲಿ ಮಂಡನೆಯಾದ 368ನೇ ಪರಿಚ್ಛೇದದ ತಿದ್ದುಪಡಿಯ ಖಾಸಗಿ ನಿರ್ಣಯವನ್ನು ಲೋಹಿಯಾ ವಿರೋಧಿಸಿದರು. ಅವರ ಎಚ್ಚರಿಕೆ ಮೀರಿ 1971ರಲ್ಲಿ ತಿದ್ದುಪಡಿ ಜಾರಿಯಾಗಿ, ಅದರ ಪರಿಣಾಮವಾಗಿ 1975ರ ತುರ್ತುಪರಿಸ್ಥಿತಿ ಜಾರಿಗೊಂಡಿತು. ಸಮಾಜದ ಹಿತಚಿಂತನೆಯಲ್ಲೇ ದೇಶದುದ್ದಕ್ಕೂ ಸುತ್ತಾಡುತ್ತಿದ್ದ ಲೋಹಿಯಾ ಅವರ ದೇಹ ದಣಿಯುತ್ತಿತ್ತು. ಪ್ರಾಸ್ಟೇಟ್ ಗ್ರಂಥಿಯ ಸಮಸ್ಯೆ ಉಲ್ಬಣಗೊಂಡು ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಯಿತು. ಆರೋಗ್ಯ ಸುಧಾರಿಸದೆ ಅ. 12ರಂದು ಲೋಹಿಯಾ ಕೊನೆಯುಸಿರೆಳೆದರು; ವಿಶ್ವ ಕಂಡ ಮಹಾನ್ ಚಿಂತಕನೊಬ್ಬನ ಭೌತಿಕ ಅವಸಾನವಾಗಿತ್ತು.

ಸಮಾಜವಾದಿ ಯುವಜನ ಸಭಾದ ಜೊತೆಗೆ ತಮ್ಮ ಚಳುವಳಿ ಜೀವನವನ್ನು ಆರಂಭಿಸಿದರು. ಕರ್ನಾಟಕದಲ್ಲಿ ವಿಕಾಸಗೊಂಡ ಲೋಹಿಯಾ–ಅಂಬೇಡ್ಕರ್ ವಿಶಿಷ್ಟ ಬೆಸುಗೆ ಈ ಎಲ್ಲರ ಮಾತು–ಬರಹಗಳಲ್ಲಿದೆ; ಇದು ದಲಿತ ಚಳುವಳಿಯ ಎರಡನೆಯ ಪೀಳಿಗೆಯ ಲಕ್ಷ್ಮೀನಾರಾಯಣ ನಾಗವಾರ, ಮಾವಳ್ಳಿ ಶಂಕರ್ ಅವರಲ್ಲೂ ಮುಂದುವರಿಯಿತು.

* * *

ಅರವತ್ತು, ಎಪ್ಪತ್ತರ ದಶಕದಲ್ಲಿ ಕರ್ನಾಟಕದ ಸಮಾಜವಾದಿ ಪಕ್ಷ, ಪ್ರಜಾಸಮಾಜವಾದಿ ಪಕ್ಷಗಳಲ್ಲಿದ್ದು ಶಾಸಕರಾದವರು: ಮುಲ್ಕಾ ಗೋವಿಂದರೆಡ್ಡಿ, ಕೆ. ಲಕ್ಕಪ್ಪ, ಎಸ್.ಎಂ. ಕೃಷ್ಣ, ಕೆ.ಜಿ. ಮಹೇಶ್ವರಪ್ಪ, ಎಂ. ನಾಗಪ್ಪ, ಅಜೀಜ್ ಸೇಠ್, ರಾಜಯ್ಯಶೆಟ್ಟಿ, ಜೆ.ಎಚ್. ಪಟೇಲ್, ಬಂಗಾರಪ್ಪ, ಅಜೀಜ್ ಸೇಠ್, ಬಸವಣ್ಣೆಪ್ಪ, ಎಂ.ಪಿ. ಈಶ್ವರಪ್ಪ, ಬಿ.ವಿ. ನಾರಾಯಣರೆಡ್ಡಿ, ಬಿ.ಎಲ್. ಗೌಡ, ದಯಾನಂದ ಕಲ್ಲೆ, ಕೆ.ಎಚ್. ರಂಗನಾಥ್, ಎಚ್. ಆರ್. ಕೇಶವಮೂರ್ತಿ, ಎಸ್. ಶಿವಪ್ಪ, ಎಚ್. ಶಿವಪ್ಪ, ಕಾಗೋಡು ತಿಮ್ಮಪ್ಪ. ಜಗಳೂರು ಇಮಾಂ ಸಾಹೇಬ್ ವಿರೋಧ ಪಕ್ಷದ ನಾಯಕರಾಗಿದ್ದರು. ಉತ್ತರ ಕನ್ನಡ ಜಿಲ್ಲೆಯಲ್ಲಿ ರೈತ ಚಳುವಳಿ ಕಟ್ಟಿದ್ದ ಕವಿ ದಿನಕರ ದೇಸಾಯಿ 1967ರಲ್ಲಿ ಪ್ರಜಾ ಸೋಷಲಿಸ್ಟ್ ಪಾರ್ಟಿಯ ಅಭ್ಯರ್ಥಿಯಾಗಿ ಉತ್ತರ ಕನ್ನಡದಿಂದ ಲೋಕಸಭೆಗೆ ಆಯ್ಕೆಯಾದರು.

ಕರ್ನಾಟಕದಲ್ಲಿ ಸಮಾಜವಾದಿ ಪಕ್ಷದ ಪ್ರಣಾಳಿಕೆಯ ಎರಡು ಪ್ರಧಾನ ಆಶಯಗಳು ದೇವರಾಜ ಅರಸರ ಕಾಂಗ್ರೆಸ್ ಸರ್ಕಾರದಿಂದ ಜಾರಿಗೆ ಬಂದವು: 'ಉಳುವವನೇ ಹೊಲದೊಡೆಯ' ಮಸೂದೆಯಾಯಿತು; ಹಾವನೂರು ವರದಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಒದಗಿಸಿತು. ಸಮಾಜವಾದಿ ಪಕ್ಷದಲ್ಲಿದ್ದ ಬಂಗಾರಪ್ಪ, ಜೆ.ಎಚ್. ಪಟೇಲ್; ಪ್ರಜಾ ಸೋಷಲಿಸ್ಟ್ ಪಕ್ಷದಲ್ಲಿದ್ದ ಎಸ್. ಎಂ. ಕೃಷ್ಣ ಮುಂದೆ ಬೇರೆ ಬೇರೆ ಪಕ್ಷಗಳಿಂದ ಕರ್ನಾಟಕದ ಮುಖ್ಯಮಂತ್ರಿಗಳಾದರು.

ಇಂದಿನ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಎಂ.ಡಿ. ನಂಜುಂಡಸ್ವಾಮಿಯವರ ಪ್ರೇರಣೆಯಿಂದ ರಾಜಕೀಯಕ್ಕೆ ಬಂದವರು; ಹಲವು ಯೋಜನೆಗಳಿಗೆ ಸಮಾಜವಾದಿ ಸ್ಪರ್ಶ ಕೊಟ್ಟವರು. ಅವರ ಮೊದಲ ಅವಧಿಯಲ್ಲಿ ಕಂದಾಯ ಮಂತ್ರಿ ಕಾಗೋಡು ತಿಮ್ಮಪ್ಪ ಮಂಡಿಸಿ, ಸದನ ಅಂಗೀಕರಿಸಿದ 'ಕರ್ನಾಟಕ ಭೂಸುಧಾರಣಾ (ತಿದ್ದುಪಡಿ) ವಿಧೇಯಕ–2016' 'ಉಳುವವನೇ ಹೊಲದೊಡೆಯ' ಕಾರ್ಯಕ್ರಮದ ಮುಂದುವರಿಕೆಯಾಗಿತ್ತು; ಕೃಷಿ ಕಾರ್ಮಿಕರು ಹಲವು ವರ್ಷ ನೆಲೆಸಿದ್ದ ಜಾಗದಲ್ಲಿ ಮನೆ ಕಟ್ಟಿಕೊಳ್ಳಲು ನೆರವಾಯಿತು.

ಕನ್ನಡ ಪತ್ರಿಕೋದ್ಯಮವೂ ಲೋಹಿಯಾರಿಂದ ಪ್ರೇರಣೆ ಪಡೆದಿದೆ. ಕಲ್ಲೆ ಶಿವೋತ್ತಮರಾವ್ ಅವರ 'ಜನಪ್ರಗತಿ' ವಾರಪತ್ರಿಕೆ ಸಮಾಜವಾದಿ ವೇದಿಕೆಯಾಗಿತ್ತು; ನಂಜುಂಡಸ್ವಾಮಿಯವರ 'ಮಾನವ'; ಗಿರಡ್ಡಿ ಗೋವಿಂದರಾಜ, ಸಿದ್ಧಲಿಂಗ ಪಟ್ಟಣಶೆಟ್ಟಿ, ಚಂದ್ರಶೇಖರ ಪಾಟೀಲರ 'ಸಂಕ್ರಮಣ'; 'ಶೂದ್ರ'; ಮಂಗ್ಳೂರ ವಿಜಯರ 'ಸಮಾಜವಾದಿ ವಾರ್ತಾಪತ್ರ' ಲೋಹಿಯಾವಾದ, ಸಮಾಜವಾದಿ ಚಿಂತನೆಗಳ ವೇದಿಕೆಗಳಾದವು. ಪತ್ರಕರ್ತರಾದ ಖಾದ್ರಿ ಶಾಮಣ್ಣ, ಬಾ.ಸು. ಕೃಷ್ಣಮೂರ್ತಿ, ಲಕ್ಷ್ಮಣ ಕೊಡಸೆ, ವಡ್ಡರ್ಸೆ ರಘುರಾಮಶೆಟ್ಟಿಯವರ ಬರಹಗಳಲ್ಲಿ ಲೋಹಿಯಾವಾದದ ಚೌಕಟ್ಟುಗಳಿದ್ದವು.

'ಪ್ರಜಾವಾಣಿ' ಆರಂಭದ ದಿನಗಳಿಂದಲೂ ಲೋಹಿಯಾರನ್ನು ಪ್ರಮುಖ ವಿರೋಧಿ ನಾಯಕರೆಂದೇ ಕಂಡು, ಅವರ ಹೇಳಿಕೆಗಳನ್ನು ಪ್ರಧಾನವಾಗಿ ಪ್ರಕಟಿಸಿತು; 'ಪ್ರಜಾವಾಣಿ', 'ಕನ್ನಡ ಪ್ರಭ', 'ಸಂಯುಕ್ತ ಕರ್ನಾಟಕ' ಪತ್ರಿಕೆಗಳು ಲೋಹಿಯಾ ಹಾಗೂ ಅನಂತರದ ಸಮಾಜವಾದಿ ರಾಜಕಾರಣವನ್ನು ಸಾಕಷ್ಟು ಬೆಂಬಲಿಸಿದವು. ಲಂಕೇಶರ 'ಲಂಕೇಶ್ ಪತ್ರಿಕೆ', ರೈತಸಂಘದ 'ನಮ್ಮ ನಾಡು', ರಾಜಶೇಖರ ಕೋಟಿಯವರ 'ಆಂದೋಲನ', ವೆಂಕಟೇಶಮೂರ್ತಿ–ಮಂಜುನಾಥ ದತ್ತರ 'ಜನತಾ ಮಾಧ್ಯಮ' ಪತ್ರಿಕೆಗಳು ಸಮಾಜವಾದಿ ಚೌಕಟ್ಟಿನ ವಿಶ್ಲೇಷಣೆಗಳನ್ನು ಪ್ರಕಟಿಸಿದವು.

ಲೇಖಕರಾದ ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ, ಜ.ಹೊ. ನಾರಾಯಣಸ್ವಾಮಿ; ಸಿನಿಮಾ ನಿರ್ದೇಶಕರಾದ ಎನ್. ಎಸ್. ಶಂಕರ್, ಶಂಕರಪ್ಪ, ಟಿ.ಎನ್. ಸೀತಾರಾಂ; ಕಲಾವಿದ ಕೆ.ಟಿ. ಶಿವಪ್ರಸಾದ್; ಸಮಾಜವಾದಿ ಯುವಜನ ಸಭಾದಿಂದ ಲೋಹಿಯಾ ಚಿಂತನೆಯತ್ತ